ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.

ಸಿಸಿ ನಂಬರ್ **122/2024**

ಫಿರ್ಯಾದಿ — ಶಿವಾನಂದ ಉರ್ಫ ಶಿವಪ್ಪ ತಂದೆ ಬಸವಣ್ಣೆಪ್ಪ ಮಾಳಗಿ ವಯಾಃ **35** ವರ್ಷ, ಉದ್ಯೋಗಃ ಚಾಲಕ ವ ಸಮಾಜ ಸೇವಕ, ಸಾಃ ಕುರುಬಗೊಂಡ ತಾಃಜಿಃ ಹಾವೇರಿ

ವಿರುದ್ಧ

ಆರೋಪಿ — ಮಲ್ಲೇಶ ತಂದೆ ತಿಮ್ಮಪ್ಪ ಗೋಟನವರ ವಯಾಃ **32** ವರ್ಷ, ಉದ್ಯೋಗಃ ನಿರುದ್ಯೋಗಿ ಸಾಃ ಕುರುಬಗೊಂಡ ತಾಃಜಿಃ ಹಾವೇರಿ

:ಆಪಾದನೆ:

ಇದರಲ್ಲಿ ಶ್ರೀ ಮಹಮ್ಮದ ಅನ್ವರ ಹುಸೇನ ಮೊಗಲಾನಿ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು ಹಾವೇರಿ ಆದ ನಾನು ಆರೋಪಿತನಾದ ನಿನ್ನ ಮೇಲೆ ಆಪಾದನೆ ಮಾಡುವುದೇನೆಂದರೆ,

ಆರೋಪಿಯಾದ ನೀನು ಮತ್ತು ಪಿರ್ಯಾದಿಯು ಒಂದೇ ಊರಿನವರು ಇದ್ದು, ಪಿರ್ಯಾದಿಯು ತನ್ನ ಚಾಲಕ ವೃತ್ತಿಯೊಂದಿಗೆ ಸುತ್ತಮುತ್ತಲಿನ ಊರಿನಲ್ಲಿ ವ ಹಾವೇರಿ ತಾಲೂಕಿನಲ್ಲಿ ಸಮಾಜ ಸೇವೆ ಮಾಡುತ್ತಾ ಇರುತ್ತಾನೆ. ಅಲ್ಲದೇ ಪಿರ್ಯಾದಿಯು ಕರ್ನಾಟಕ ರಾಜ್ಯ ಮಾಹಿತಿ ಹಕ್ಕು ವ ಸಮಾಜಿಕ ಕಾರ್ಯಕರ್ತರ ವೇದಿಕೆ (ರಿ) ಇದರ ಹಾವೇರಿ ಜಿಲ್ಲಾ ಕಾರ್ಯಾಧ್ಯಕ್ಷರು ಇರುತ್ತಾರೆ ಮತ್ತು ಸರಿಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ನಂಬರಃ 1 ಕುರುಬಗೊಂಡ ಇದರ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾಗಿ ಸಮಿತಿಯ ಸದಸ್ಯರು ಇರುತ್ತಾರೆ. ಹೀಗಿರುವಾಗ ಆರೋಪಿಯಾದ ನೀನು ಪಿರ್ಯಾದಿಯ ಬಗ್ಗೆ ವಾಟ್ಸಾಫ್ ಸ್ಟೇಟಸ್‌ನಲ್ಲಿ " ಪ್ರಕಟಣೆ ಶಿವಾನಂದ ಬಿ.ಎಂ ಎಂಬ ಹೆಸರಿನ ವ್ಯಕ್ತಿ ಕುರುಬಗೊಂಡ ಗ್ರಾಮದಲ್ಲಿ ಇಲ್ಲ ಇವನು ಇದ್ದಾನೆ ಎನ್ನುವದಕ್ಕೆ ಯಾವುದೇ ರೀತಿ ದಾಖಲೆಗಳು ಇಲ್ಲ, (ರೇಷನ ಕಾರ್ಡ, ಆಧಾರಕಾರ್ಡ, ಶಾಲಾ ದಾಖಲಾತಿ ಇರುವದಿಲ್ಲ) ಆದರೆ ಈ ವ್ಯಕ್ತಿ ನಮ್ಮೂರಿನ ಹೆಸರನ್ನು ಹೇಳಿಕೊಂಡು ನೂರಾರು ಜನರಿಗೆ ವಂಚನೆ, ಮೋಸ ಮಾಡಿದ್ದಾನೆ ಅನೇಕ ರೀತಿಯ ಕೃತ್ಯಗಳನ್ನು ಮಾಡುತ್ತಿದ್ದಾನೆ ಹಾಗಾಗಿ ಇದನ್ನೆಲ್ಲ ಕಂಡು ಕೆಲವು ವಿದ್ಯಾವಂತರು 120 ಬಿ ಕಾಯ್ದೆ ಪ್ರಕಾರ ಕೇಸನ್ನು ದಾಖಲು ಮಾಡುತ್ತಿದ್ದಾರೆ

ಹಾಗಾಗಿ ಇವರ ವಂಚನೆಗೆ ಯಾರು ಯಾರು ಬಲಿಯಾಗದಿರಿ ನಮ್ಮ ಜೊತೆ ಸಹಕರಿಸಿ ಅಂತಾ ದಿನಾಂಕಃ 26.01.2022 ರಂದು ಬರೆದುಕೊಂಡಿದ್ದು, ಅಲ್ಲದೇ ಮತ್ತೆ ಮಾಡೋದೆಲ್ಲ ಕ್ರಿಮಿನಲ್ ಕಲಸ ವಾಟ್ಸಾಪ್ ಸ್ಟೇಟಸ್ ನೋಡಿದ್ರೆ ಅಭಿವೃದ್ದಿ ಕೆಲಸ ಇಂತವರನ್ನ ಏನ ತೊಗೊಂಡು ಹೊಡೆದರು ಕೇಳರೋರಿಲ್ಲ ಅಂತಾ ಮತು ಸರ್ಕಾರಿ ಶಾಲೆಗಳನ್ನು ಹಾಳು ಮಾಡುತ್ತಿರುವ ಕೆಲವು ಶಾಲಾ ಸಲಹಾ ಸಮಿತಿಯ ಅಧ್ಯಕ್ಷರೇ, ಸದಸ್ಯರೇ ನೀವು ಮಾಡುತ್ತಿರುವ ಮೋಸದ ಜಾಲಕ್ಕೆ ಸಿಕ್ಕು ಅಭಿವೃದ್ದಿ ಹೊಂದದುತ್ತಿರುವ ಸರ್ಕಾರಿ ಶಾಲೆಗಳು ಅಭಿವೃದ್ದಿಯಿಂದ ಕುಂಠಿತಗೊಳ್ಳುತ್ತಿವೆ ಕೊಳ್ಳು ಹೊಡೆಯುವರನ್ನು ಜೊತೆಯಲ್ಲಿಟ್ಟುಕೊಂಡು ಶಾಲಾ ಮಕ್ಕಳಿಗೆ ಅನ್ಯಾಯ ಮಾಡುತ್ತಿರುವ ನಿಮಗೆ ತಕ್ಕ ಪಾಠ ಆಗೇ ಆಗುತ್ತದೆ ಆ ಮಕ್ಕಳ ಶಾಪ ನಿಮ್ಮ ಮಕ್ಕಳಿಗೆ ತಟ್ಟೆ ತಟ್ಟುತ್ತದೆ ಬರೆದಿಟ್ಟುಕೊಳ್ಳಿ " ಅಂತಾ ಸ್ಟೇಟಸ್ ಹಾಕಿದ್ದು, ದಿನಾಂಕಃ 15.02.2023 ರಂದು ಆರೋಪಿತನಾದ ನಿನ್ನ ವಾಟ್ಸಾಪ್ ಸ್ಟೇಟಸ್ ನಲ್ಲಿ " ತಂದೆ ಮರಣದಿ ದಿನಾಂಕಃ 25.12.2017 ರಂದು ತಂದೆ ಮರಣದ ನಂತರ ಅನುಕಂಪದ ಆಧಾರದ ಮೇಲೆ ನನ್ನ ತಮ್ಮ ಪ್ರವೀಣನನನ್ನು ವಾಟರ್ ಮ್ಯಾನನಾಗಿ ಠರಾವು ಪುಸ್ತಕದಲ್ಲಿ ನಮೂದು ಮಾಡಲಾಗಿದೆ, ತಾಕತ್ತಿದ್ದರೆ ನೀವು ನಿಮ್ಮಪ್ಪಂದಿರಿಗೆ ಹುಟ್ಟಿದರೆ ಸಹಾಯ ಮಾಡುವ ಗ್ರಾಮ ಪಂಚಾಯತ್ ಸದಸ್ಯರು ಮತ್ತು ಸಹಚರರು ಕೆಲಸದಿಂದ ತಗಿಸಿರಿ" ಅಂತಾ ಬರೆದುಕೊಂಡು ಪಿರ್ಯಾದಿಯನ್ನು ಉದ್ದೇಶಿಸಿ ಈ ರೀತಿ ಬರೊಕೊಂಡಿದ್ದು, ಹೀಗೆ ಮುಂತಾದ ಅವಹೇಳನಕಾರಿಯಾಗಿ ಪಿರ್ಯಾದಿಯ ವಿರುದ್ದ ಸಾರ್ವಜನಿಕವಾಗಿ ಅವಮಾನುವಾಗುವ ಹಾಗೇ ಬರೆದುಕೊಂಡಿದು, ಪಿರ್ಯಾದಿಗೆ ಸಮಾಜದಲ್ಲಿ ಗೌರವ ಕಡಿಮೆಯಾಗಿದ್ದು ಅಲ್ಲದೇ ಪಿರ್ಯಾದಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ನೋವುಂಟು ಮಾಡಿದ್ದು ಹಾಗೂ ಪಿರ್ಯಾದಿಯ ಸಮಾಜದಲ್ಲಿ ಮಾನಹಾನಿ ಉಂಟು ಮಾಡಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ.**500** ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುರಿತ್ತೀರಿ?

ಎರಡನೇಯದಾಗಿ ಆರೋಪಿಯಾದ ನೀನು ನಿನ್ನ ಮೊಬೈಲ್ ಸ್ಟೇಟಸ್‌ನಲ್ಲಿ ಪಿರ್ಯಾದಿಗೆ ಅವಮಾನ ಹಾಗೂ ಅವರ ಮಾನಕ್ಕೆ ಕುಂದುಂಟಾಗುವ ರೀತಿಯಲ್ಲಿ ನಿನ್ನ ಮೊಬೈಲ್‌ನಲ್ಲಿ ಸ್ಟೇಟಸ್‌ನ್ನು ಇಟ್ಟಿದ್ದು, ಕಾರಣ ಭಾರತೀಯ ದಂಡ ಸಂಹಿತೆ

ಕಲಂ.501 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುರಿತ್ತೀರಿ?

ಮೂರನೇಯದಾಗಿ ಆರೋಪಿಯಾದ ನೀನು ಪಿರ್ಯಾದಿಗೆ ಅವಾಚ್ಯ ಶಬ್ದಗಳಿಂದ ಬೈದಿದ್ದು, ಕಾರಣ ಭಾರತೀಯ ದಂಡ ಸಂಹಿತೆ ಕಲಂ.501 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುರಿತ್ತೀರಿ?

ಮೇಲೆ ಹೇಳಿದ ಆರೋಪಣೆ ಮೇಲೆ ನೀವು ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಿರುತ್ತೀರಿ ಎಂದು ನಿರ್ದೇಶಿಸಿದ್ದೇನೆ.

ಹಾವೇರಿ.
ದಿಃ 15-09-2025.

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>

<u>ಸಿಸಿ ನಂಬರ್ **122/2024**</u>

<u>ದಿನಾಂಕಃ **15.09.2025**</u>

<u>ಫಿರ್ಯಾದಿ</u> ಶ್ರೀಮತಿ ಫಾಮೋದ ಕೋಂ ಹಸನಮೀಯಾ ನರೇಗಲ್ಲ
ವಯಾಃ **36** ವರ್ಷ**,** ಉದ್ಯೋಗಃ ಬ್ಯೂಟಿಪಾರ್ಲರ್
ಸಾಃ ಬಸವೇಶ್ವರ ನಗರ**, 9** ನೇ ಕ್ರಾಸ**,** ಹಾವೇರಿ

ವಿರುದ್ದ

<u>ಆರೋಪಿ</u> ಶ್ರೀಮತಿ ರೇಖಾ ಕೋಂ ರಮೇಶ ಕೊಟಕ್
ವಯಾಃ **55** ವರ್ಷ**,** ಉದ್ಯೋಗಃ ವ್ಯಾಪಾರ
ಸಾಃ ಬಸವೇಶ್ವರ ನಗರ**,** ಬಿ ಬ್ಲಾಕ್ **2** ನೇ ಕ್ರಾಸ
ಹಾವೇರಿ ತಾಃಜಿಃ ಹಾವೇರಿ

1. ಈ ಮೇಲೆ ಹೇಳಿದ ಆರೋಪಣೆ ನಿನಗೆ ಅರ್ಥವಾಗಿದೆಯೇ?

ಉತ್ತರಃ

2. ಈ ಮೇಲೆ ಹೇಳಿದ ಆರೋಪಣೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?

ಉತ್ತರಃ

*(ಈ ಮೇಲೆ ಹೇಳಿದ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

(ಮಹಮ್ಮದ ಅನ್ವರ ಹುಸೇನ ಮೊಗಲಾನಿ)
ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಹಾವೇರಿ.

ಆರೋಪಿಯ ಸಹಿ: